## ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212


ಸಂಖ್ಯೆ: ಸಿಆಸುಇ 16 ಮಾಸೆ 2018 ದಿನಾಂಕ: 11-05-2018

## ಪತ್ರಿಕಾ ಪ್ರಕಟಣೆ

## ಸಂತಾಪ

ಬೆಂಗಳೂರು ಮೇ 11 : ಚುನಾವಣಾ ಕರ್ತವ್ಯದ ಮೇಲೆ ಬಾಗಲಕೋಟೆ ಜಿಲ್ಲೆಗೆ ನಿಯೋಜಿತರಾಗಿದ್ದ ಉಪ ಪೋಲೀಸ್ ವರಿಷ್ಠಾಧಿಕಾರಿ ಶ್ರೀ ಬಾಳೇಗೌಡ, ಸಬ್‌ಇನ್ಸ್‌ಪೆಕ್ಟರ್ ಹೆಚ್.ಕೆಶಿವಸ್ವಾಮಿ , ವಾಹನ ಚಾಲಕ ಶ್ರೀ ವೇಣುಗೋಪಾಲ ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದು, ಇವರ ಅಕಾಲಿಕ ನಿಧನಕ್ಕೆ ಮುಖ್ಯ ಚುನಾವಣಾಧಿಕಾರಿ ಶ್ರೀ ಸಂಜೀವ್ ಕುಮಾರ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಬಳಿ ಇಳಕಲ್ ರಸ್ತೆಯಲ್ಲಿ ಮಲ್ಲಾಪುರ ಕ್ರಾಸ್ (ಕೂಡಲ ಸಂಗಮ ಕ್ರಾಸ್) ಬಾಗಲಕೋಟೆ ಕಡೆಯಿಂದ ಬಂದ ಲಾರಿ ಹಾಗೂ ಬಾಗಲಕೋಟೆ ಕಡೆ ಹೋಗುತ್ತಿದ್ದ ಪೋಲೀಸ್ ಜೀಪಿನ ನಡುವೆ ಮುಖಾಮುಖಿ ಅಪಘಾತ ಸಂಭವಿಸಿ ಸ್ಥಳದಲ್ಲಿಯೇ ದಿನಾಂಕ: 11-05-2018ರಂದು 1.00 ಗಂಟೆಗೆ ಮೃತಪಟ್ಟಿದ್ದಾರೆ.

ದಿವಂಗತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಮುಖ್ಯ ಚುನಾವಣಾಧಿಕಾರಿಗಳು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಪತ್ರ ಸಂ: ಜಿಒಐ ಇಸಿಐ ಪತ್ರ ಸಂ: 218/6/2014/ ಇಪಿಎಸ್ ದಿನಾಂಕ 25-3-2014 ರನ್ವಯ ಮೃತರಿಗೆ ಸಲ್ಲಬೇಕಾದ ಪರಿಹಾರದ ಮೊತ್ತ ಮತ್ತು ಅವರ ಕುಟುಂಬಕ್ಕೆ ಅಗತ್ಯವಿರುವ ಎಲ್ಲ ನೆರವನ್ನು ನೀಡಲಾಗುವುದು ಎಂದು ಭರವಸೆಯಿತ್ತಿದ್ದಾರೆ.

****